ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	2091 (2480)
ಸದಸ್ಯರ ಹೆಸರು	:	ಶ್ರೀ ಪಿ. ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	23.03.2022
ಉತ್ತರಿಸುವ ಸಚಿವರು	:	ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯಿಂದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳೆಷ್ಟು ; (ವಿವರ ನೀಡುವುದು)	ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಒಟ್ಟು 08 ಯೋಜನೆಗಳು ಜಾರಿಯಲ್ಲಿರುತ್ತವೆ. ಯೋಜನೆಗಳ ವಿವರಗಳನ್ನು ಅನುಬಂಧ - **"ಎ"** ನಲ್ಲಿ ಒದಗಿಸಿದೆ.
(ಆ)	ಮುಂಬರುವ ವರ್ಷದಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯಿಂದ ನೂತನ ಯೋಜನೆಗಳನ್ನು ಜಾರಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ? (ಇದ್ದಲ್ಲಿ, ಯೋಜನೆಗಳ ವಿವರ ನೀಡುವುದು)	ಮುಂಬರುವ ವರ್ಷದಲ್ಲಿ ಜಾರಿ ಮಾಡಲು ಉದ್ದೇಶಿಸಿರುವ ನೂತನ ಯೋಜನೆಗಳ ವಿವರಗಳನ್ನು ಅನುಬಂಧ - **"ಬಿ"** ನಲ್ಲಿ ಒದಗಿಸಿದೆ.

ಸಂಖ್ಯೆ:ಮೂಲಇ 19 ಯುಐಪಿ 2022

(ವಿ. ಸೋಮಣ್ಣ)
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ-ಎ

ಪ್ರಸಕ್ತ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ

(ರೂ ಲಕ್ಷಗಳಲ್ಲಿ)

ಕ್ರ.ಸ		ಕಾರ್ಯಕ್ರಮ / ಯೋಜನೆ	ಆಯವ್ಯಯ ಅಂದಾಜು 2021-22
ವಿಮಾನ ನಿಲ್ದಾಣಗಳ ಯೋಜನೆಗಳು			
01	Revenue	*3451-00-090-1-18-059- Regional Air Connectivity other expenses.(ಪ್ರಾದೇಶಿಕ ವಾಯು ಸಂಪರ್ಕ – ಇತರೆ ಖರ್ಚುಗಳು)*	4700.00
02	Revenue	*3451-00-090-1-11-071 - Development of Minor Airports Building Expenses (ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ – ಕಟ್ಟಡ ವೆಚ್ಚಗಳು)*	504.00
03	Capital	*5465-01-190-1-05-132- Development of Minor Airports –Capital Expenses (ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ–ಬಂಡವಾಳ ವೆಚ್ಚಗಳು)*	40000.00
		ಒಟ್ಟು ಮೊತ್ತ	45,204.00
ರೈಲ್ವೆ ಯೋಜನೆಗಳು			
04	Capital	*5465-01-190-3-04-211- K - RIDE - RoB/ RuB project – Investment (ಕೆ.ಆರ್.ಐ.ಡಿ.ಇ– ಮೇಲ್ಸೇತುವೆ/ಕೆಳಸೇತುವೆ ಯೋಜನೆ – ಬಂಡವಾಳ ಹೂಡಿಕೆ)*	6000.00
05	Capital	*5465-01-190-3-05-132 Cost Sharing Railway projects- Capital Expenses(ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ–ಬಂಡವಾಳ ವೆಚ್ಚಗಳು)*	96788.00
06	Capital	*5465-01-190-3-05-133* Special Development Plan (ವಿಶೇಷ ಅಭಿವೃದ್ಧಿ ಯೋಜನೆ)	6212.00
		ಒಟ್ಟು ಮೊತ್ತ	1,09,000.00
ಪಿಪಿಪಿ ಕೋಶ			
07	Revenue	*3451-00-090-1-06-059 –PPP (Developmnental Activities Other Expenses (ಪಿಪಿಪಿ ಅಭಿವೃದ್ಧಿ ಕಾರ್ಯಕ್ರಮಗಳು ಇತರೆ ಖರ್ಚುಗಳು)*	267.00
08	Capital	*5465-01-190-1-20-211- Karnataka Viability Gap Investment.(ಕರ್ನಾಟಕ ಸ್ಥಿತ್ಯಂತರ–ಬಂಡವಾಳ ಹೂಡಿಕೆ)*	226.00
		ಒಟ್ಟು ಮೊತ್ತ	493.00
		ಸಂಯೋಜಿತ ಒಟ್ಟು ಮೊತ್ತ	1,54,697.00

ಸಂಖ್ಯೆ:ಮೂಅಇ 19 ಯುಐಪಿ 2022

(ಕಲಾವತಿ ಎಸ್ ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲ ಸಾರಿಗೆ ಇಲಾಖೆ.

ಅನುಬಂಧ-ಬಿ

2022-23 ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಜಾರಿ ಮಾಡಲು ಉದ್ದೇಶಿಸಿರುವ ಯೋಜನೆಗಳ ವಿವರ

(ರೂ.ಕೋಟಿಗಳಲ್ಲಿ)

ಕ್ರ.ಸಂ.	ಯೋಜನೆಗಳ ವಿವರ	ಅಂದಾಜು ವೆಚ್ಚ
1	2	
1	ಕರ್ನಾಟಕ ರಾಜ್ಯದಲ್ಲಿ ರೈಲ್ವೆ ಸಾಂದ್ರತೆಯನ್ನು ಹೆಚ್ಚಿಸುವ ಮೂಲಕ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ನಮ್ಮ ಸರ್ಕಾರವು ನಿರ್ಧರಿಸಿದೆ. ಒಂಭತ್ತು ನೂತನ ರೈಲ್ವೆ ಮಾರ್ಗ ನಿರ್ಮಾಣವನ್ನು ರೈಲ್ವೆ ಇಲಾಖೆಯೊಂದಿಗೆ ಶೇ.50:50ರ ವೆಚ್ಚ ಹಂಚಿಕೆಯ ಆಧಾರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಗಿಣಿಗೇರಾ-ರಾಯಚೂರು, ತುಮಕೂರು-ರಾಯದುರ್ಗ, ಗದಗ-ವಾಡಿ, ಕುಡಚಿ-ಬಾಗಲಕೋಟೆ, ಶಿವಮೊಗ್ಗ-ಶಿಕಾರಿಪುರ-ರಾಣಿಬೆನ್ನೂರು, ತುಮಕೂರು-ಚಿತ್ರದುರ್ಗ-ದಾವಣಗೆರೆ, ಚಿಕ್ಕಮಗಳೂರು-ಬೇಲೂರು ಹಾಗೂ ಬೇಲೂರು- ಹಾಸನ ರೈಲು ಮಾರ್ಗ ಯೋಜನೆಗಳಿಗೆ ಚಾಲನೆ ನೀಡಲಾಗಿದೆ.	--
2	55 ಕಿ.ಮೀ. ಉದ್ದದ ಗದಗ-ಯಲವಿಗಿ ನೂತನ ರೈಲು ಮಾರ್ಗ ಯೋಜನೆಯನ್ನು ರೂ.640 ಕೋಟಿ ಅಂದಾಜು ವೆಚ್ಚದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಭೂಸ್ವಾಧೀನ ವೆಚ್ಚವನ್ನು ಭರಿಸಿ ಕೇಂದ್ರದ ಪಾಲಿನೊಂದಿಗೆ ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.	640.00
3	ಉತ್ತರ ಕರ್ನಾಟಕದ ಬಹುದಿನಗಳ ನಿರೀಕ್ಷೆಯ ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆಯನ್ನು ರೂ.927 ಕೋಟಿ ಅಂದಾಜು ವೆಚ್ಚದಲ್ಲಿ ತ್ವರಿತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.	927.00
4	ಕೇಂದ್ರ ಸರ್ಕಾರವು 460 ಕಿ.ಮೀ. ಉದ್ದದ ಚೆನ್ನೈ-5ಬೆಂಗಳೂರು-ಮೈಸೂರು ಹೈಸ್ಪೀಡ್ ರೈಲು ಕಾರಿಡಾರ್ ಅನ್ನು ನಿರ್ಮಿಸಲು National High Speed Railway Project ರವರಿಂದ ವಿಸ್ತೃತ ಯೋಜನಾ ವರದಿಯನ್ನು (DPR) ಸಿದ್ಧಪಡಿಸುತ್ತಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಲಿದೆ.	--
5	ಹೆದ್ದಾರಿಗಳಲ್ಲಿ ವಾಹನ ದಟ್ಟಣೆ ತಡೆಯಲು 20 ನೂತನ ರೈಲ್ವೆ/ ರಸ್ತೆ ಮೇಲ್ಸೇತುವೆಗಳನ್ನು ರೈಲ್ವೆ ಇಲಾಖೆಯೊಂದಿಗೆ ವೆಚ್ಚ ಹಂಚಿಕೆ ಮಾದರಿಯಲ್ಲಿ ನಿರ್ಮಿಸಲು ತೀರ್ಮಾನಿಸಿದೆ.	--
6	ರಾಯಚೂರಿನಲ್ಲಿ ಗ್ರೀನ್-ಫೀಲ್ಡ್ ವಿಮಾನ ನಿಲ್ದಾಣವನ್ನು ಜಿಲ್ಲಾ ಖನಿಜ ನಿಧಿ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಆರ್ಥಿಕ ನೆರವಿನೊಂದಿಗೆ ರೂ.186 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಒಡಂಬಡಿಕೆಯನ್ನು ಮಾಡಲಾಗುವುದು.	186.00

7	ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುವುದು.	--
8	ಕೇಂದ್ರ ಸರ್ಕಾರದ ನೆರವಿನೊಂದಿಗೆ ಮೈಸೂರು ವಿಮಾನ ನಿಲ್ದಾಣದ ರನ್‌ವೇ ಯನ್ನು ವಿಸ್ತರಿಸಲಾಗುವುದು.	--
9	ರಾಜ್ಯದಲ್ಲಿ ವಾಯುಮಾರ್ಗ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಲು ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಪಿ.ಪಿ.ಪಿ ಮಾದರಿಯಡಿ ಹೆಲಿಪೋರ್ಟ್‌ಗಳನ್ನು ರೂ. 30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.	30.00

ಸಂಖ್ಯೆ:ಮೂಲಇ 19 ಯುಐಪಿ 2022

(ಕಲಾವತಿ ಎಸ್.ಎನ್.)

ಸರ್ಕಾರದ ಅಧೀನ ಕಾರ್ಯದರ್ಶಿ-1,

ಮೂಲಸೌಲಭ್ಯ ಬಂದರು ಮತ್ತು

ಒಳನಾಡು ಜಲಸಾರಿಗೆ ಇಲಾಖೆ